**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ: 235/2023**

**ಸಾಕ್ಷಿಯನ್ನು ದಿಃ 24-02-2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿ ಪರ ಶ್ರೀ. SN ವಕೀಲರಿಂದಃ**

ನಾನು 8ನೇ ತರಗತಿ ಓದಿದ್ದೇನೆ. ಘಟನೆಯ ದಿನಾಂಕಃ 31.01.2023 ರಂದು ರಾತ್ರಿ 10 ಗಂಟೆಗೆ ಆಗಿದೆ. ನನ್ನ ಮಗ ಊಟ ಮುಗಿಸಿ ರಾತ್ರಿ 10 ರಿಂದ 10.05 ಕ್ಕೆ ವಾಕಿಂಗ್ ಗೆ ಮನೆಯಿಂದ ಹೊರಗೆ ಹೋದರು. ನನ್ನ ಮಗ ಮನೆಯಿಂದ ಹೊರಗೆ ಹೋದ 2-3 ನಿಮಿಷದ ಒಳಗೆ ಆತ ಚಿರಾಡುವ ಶಬ್ದ ಕೇಳಿತು. ನಮ್ಮ ಮನೆ ಮತ್ತು ರಸ್ತೆಗೆ ಸ್ವಲ್ಪ ಅಂತರ ಇದೆ ಎಂದರೆ ಸರಿ. ಮನೆಯಿಂದ ರಸ್ತೆ ತಲುಪಬೇಕಾದರೆ 2-3 ನಿಮಿಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ಮನೆಯ ಪಕ್ಕವೇ ರಸ್ತೆ ಇದೆ. ಆರೋಪಿ ವೇಗವಾಗಿ ಬಂದಿದ್ದದಲ್ಲಿ ನನ್ನ ಮಗನಿಗೆ ಏಟಾಗುತ್ತಿತ್ತು ಎಂದರೆ ಆರೋಪಿ ವೇಗವಾಗಿ ದ್ವಿಚಕ್ರ ವಾಹನದಲ್ಲಿ ಗುದ್ದಲೆಂದು ಬಂದು ವಾಹನವನ್ನು ತಕ್ಷಣ ತಿರುಗಿಸಿದ್ದಾರೆ. ಆರೋಪಿ ವೇಗವಾಗಿ ವಾಹನವನ್ನು ಚಲಾಯಿಸಿದ್ದಲ್ಲಿ ನಮ್ಮ ಮನೆಯ ಮುಂದೆ ಬಂದು ನಿಲ್ಲಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆರೋಪಿ ವೇಗವಾಗಿ ಬಂದು ಏಕಾಏಕಿ ತನ್ನ ವಾಹನವನ್ನು ತಿರುಗಿಸಿ ನಮ್ಮ ಮನೆಯ ಮುಂದೆ ಬಂದು ಒಂದು ಕಾಲನ್ನು ನೆಲಕ್ಕೆ ಊರಿ ವಾಹನವನ್ನು ನಿಲ್ಲಿಸಿದರು. ಆರೋಪಿ ವೇಗವಾಗಿ ಬಂದಿದ್ದಲ್ಲಿ ವಾಹನವನ್ನು ತಕ್ಷಣ ನಿಲ್ಲಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನಮಗನ ಚೀರಾಟ ಕೇಳಿ ಮೊದಲು ನಾನು ಬಂದೆ. ನಂತರ ನನ್ನ ತಾಯಿಯಾದ ಚಾಸಾ-1 ರವರು ಬಂದರು. ಅನಂತರ ಚಾಸಾ-4 ರವರು ಬಂದರು. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಬರಲಿಲ್ಲ. ಆರೋಪಿ ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ಹಲ್ಲೆ ಮಾಡಿ ನೋವುಂಟು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಹೊಡೆದು ನನ್ನ ಬಟ್ಟೆಯನ್ನು ಹರಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಗಲಾಟೆಯ ಶಬ್ದ ಕೇಳಿ ಸುಮಾರು 15 ರಿಂದ

20 ಜನ ಸೇರಿದ್ದರು. ಅವರ ಹೆಸರು ಹೇಳಲಾಗುತ್ತದೆಯೇ ಎಂದರೆ ಇಲ್ಲ. ಆರೋಪಿ ನಾನು ಧರಿಸಿದ್ದ ಚೂಡಿದಾರ್ ಟಾಪ್ ನ ಮುಂಭಾಗವನ್ನು ಹರಿದು ಹಾಕಿದರ. ನಾನು ಹಳದಿ ಬಣ್ಣದ ಚೂಡಿದಾರ್ ಧರಿಸಿದ್ದೆ. ನನ್ನ ತಾಯಿ ಧರಿಸಿದ್ದ ನೈಟಿಯ ಹಿಂಭಾಗವನ್ನು ಹರಿದು ಹಾಕಿದರು. ಅವರು ಧರಿಸಿದ್ದ ನೈಟಿ ನೇರಳೆ ಬಣ್ಣದಾಗಿತ್ತು. ಆರೋಪಿ ಬಟ್ಟೆಗಳನ್ನು ಹರಿದು ಹಾಕಿದ ಕಾರಣದಿಂದ ನನಗೆ ಏಟಾಗಿಲ್ಲ ತಾಯಿಗೆ ಏಟಾಗಿದೆ. ಆರೋಪಿ ನನ್ನ ಚೂಡಿದಾರ್ ಮತ್ತು ಚಾಸಾ-1ರವರ ನೈಟಿಯನ್ನು ಹರಿದು ಹಾಕಿಲ್ಲ ಎಂದರೆ ಸರಿಯಲ್ಲ. ಚಾಸಾ-1ರವರು ಒಂದು ಟವಲ್ ನಿಂದ ನನ್ನನ್ನು ಮುಚ್ಚಲು ಬಂದರು. ಸದರಿ ಟವಲ್ ಅನ್ನು ಚಾಸಾ-1 ರವರು ನಮ್ಮ ಮನೆಯಿಂದ ತಂದಿದ್ದರು. ಸದರಿ ಟವಲನ್ನು ಪೋಲಿಸರಿಗೆ ಕೊಟ್ಟಿಲ್ಲ. ಚಾಸಾ-1 ರವರು ಯಾವುದೇ ಬಟ್ಟೆಯಿಂದ ನನ್ನನ್ನು ಮುಚ್ಚಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವ ಜಾಗದಿಂದ ಪೆನ್ನು ತೆಗೆದ ಎಂದು ಗೊತ್ತಿಲ್ಲ. ಪೆನ್ನಿನ ರೀತಿಯಲ್ಲಿ ಚಾಕು ಬರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಯಾವುದೇ ಗಾಯ ಆಗದೇ ಇದ್ದರೂ ಸಹ ಆರೋಪಿಗೆ ತೊಂದರೆ ಕೊಡಬೇಕು ಎಂದು ನಾವೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಗಲಾಟೆ ಅಂದಾಜು ಎಷ್ಟು ಸಮಯ ನಡೆಯಿತು ಎಂದರೆ ಈಗ ಹೇಳಲು ಆಗುವುದಿಲ್ಲ. ನಾವು ಆಸ್ಪತ್ರೆಗೆ ಹೋದೆವು. ಚಿಕಿತ್ಸೆ ಪಡೆದು ಅದೇ ದಿನ ವಾಪಸ್ಸು ಬಂದೆವು. ಅದೇ ದಿನ ಆರೋಪಿಯ ವಿರುದ್ಧ ದೂರು ಕೊಟ್ಟಿದ್ದಿರಾ ಎಂದರೆ ಕೊಟ್ಟಿದ್ದೇವೆ. ಅದೇ ದಿನ ರಾತ್ರಿ ಠಾಣೆಗೆ ಹೋದೆವು, ಮರುದಿನ ಪೋಲಿಸರು ಆಸ್ಪತ್ರೆಗೆ ಬಂದರು, ಚಾಸಾ-1ರವರ ಹೇಳಿಕೆ ಪಡೆದುಕೊಂಡರು. ನಾನು ಅದೇ ದಿನ ಪೋಲೀಸ್ ಠಾಣೆಗೆ ಹೋದಾಗ ದೂರನ್ನು ಬರೆದುಕೊಟ್ಟಿದ್ದೇನೆ. ಯಾರು ಬರೆದರು ಎಂದರೆ ಪೋಲಿಸರು ಹೇಳಿದರು ನಾನು ಬರೆದೆ. ನಾನು ಬರೆದ ದೂರನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-3ರ ದೂರನ್ನು ಸಾಕ್ಷಿ ಗುರುತಿಸುತ್ತಾರೆ. ನಿಪಿ-3 ಆಸ್ಪತ್ರೆಯಲ್ಲಿ ದಾಖಲಿಸಿಕೊಂಡ ಹೇಳಿಕೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗದೇ ಇರುವ ಕಾರಣ ನಾನು ಠಾಣೆಗೆ ಹೋಗಿ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ರಾಬರ್ಟ್ ಮತ್ತು ವೆನ್ನಿ ಥಾಮಸ್ ಬೇರೆ ಬೇರೆ ಹೆಸರು. ವೆನ್ನಿ ಥಾಮಸ್ ನನ್ನ ದೊಡ್ಡಮ್ಮನ ಮಗ. ನಾನು, ಚಾಸಾ-1, 3 ಮತ್ತು 4ರವರು ಆರೋಪಿಯೊಂದಿಗೆ ಗಲಾಟೆ ಮಾಡಿ ಹೊಡೆದು ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ವೆನ್ನಿ ಥಾಮಸ್ ರವರು

ಆರೋಪಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ವೆನ್ನಿ ಥಾಮಸ್ ರವರ ಪಿತೂರಿಯಿಂದಲೇ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಯ ಬೆಳವಣಿಗೆಯನ್ನು ಸಹಿಸಲಾರದೇ ನಾನು,ನನ್ನ ಕುಟುಂಬದವರು ವೆನ್ನಿ ಥಾಮಸ್ ರವರೊಂದಿಗೆ ಶಾಮಿಲಾಗಿ ಅಪಪ್ರಚಾರ ಮಾಡುವ ಸಲುವಾಗಿ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಪೋಲಿಸರು ದಿಃ 02.02.2023 ರಂದು ಸ್ಥಳ ಮಹಜರಿಗೆ ಬೆಳಿಗ್ಗೆ 9-30 ರಿಂದ 10-30ರ ಒಳಗೆ ಬಂದಿದ್ದಾರೆ. ಆ ದಿನ ಇಬ್ಬರು ಪೋಲಿಸರು ಬಂದಿದ್ದರು. ಸ್ಥಳವನ್ನು ನಾನೇ ತೋರಿಸಿದ್ದೇನೆ. ಚಾಸಾ-6 ಮತ್ತು 7 ರವರು ಮಹಜರಿಗೆ ಸಹಿ ಹಾಕಿದ್ದಾರೆ. ಮಹಜರಿನಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿಲ್ಲ. ಮು.ಮಾ-1 ಮತ್ತು 2 ಅನ್ನು ಮನೆಯಲ್ಲಿ ಇಟ್ಟಿದ್ದೆವು. ಅದನ್ನೆ ತಂದು ಕೊಟ್ಟಿದ್ದೇವೆ. ಮುಮಾ-1 ಮತ್ತು 2ರ ಬಟ್ಟೆಯನ್ನು ನಾವೇ ಹರಿದುಹಾಕಿ ಸೃಷ್ಟಿ ಮಾಡಿಕೊಂಡು ಪೋಲಿಸರಿಗೆ ಕೊಟ್ಟಿದ್ದೇವೇ ಎಂದರೆ ಸರಿಯಲ್ಲ. ಗಲಾಟೆಯಾದ ಸಮಯದಿಂದ ಪೋಲಿಸರು ಬರುವವರೆಗೆ ಬಟ್ಟೆ ಎಲ್ಲಿತ್ತು ಎಂದರೆ ಮನೆಯಲ್ಲಿಟ್ಟಿದ್ದೆವು. ಘಟನೆಯ ಸಮಯದಲ್ಲಿ ಬಟ್ಟೆ ಹರಿದಿದ್ದಲ್ಲಿ ಅದನ್ನು ನಾನು ಪೋಲಿಸರಿಗೆ ಅದೇದಿನ ರಾತ್ರಿ ಹಾಜರುಪಡಿಸುತ್ತಿದ್ದೆ ಎಂದರೆ ನಾನು ಅದೇ ಬಟ್ಟೆಯಲ್ಲಿ ಠಾಣೆಗೆ ಹೋಗಿದ್ದೇನೆ. ನಾನು ಆ ರೀತಿ ಪೋಲೀಸ್ ಠಾಣೆಗೆ ಹೋಗಿದ್ದಲ್ಲಿ ಪೋಲಿಸರು ಆಗಲೇ ನನ್ನ ದೂರನ್ನು ಸ್ವಿಕರಿಸುತ್ತಿದ್ದರು ಎಂದರೆ ಸರಿಯಲ್ಲ. ಬಟ್ಟೆ ಹರಿಯದೇ ಇದ್ದ ಕಾರಣ ನಾನು ಪೋಲೀಸ್ ಠಾಣೆಗೆ ಹೋಗಿದ್ದರೂ ಸಹ ಪೋಲಿಸರು ದೂರನ್ನು ಸ್ವೀಕರಿಸಲಿಲ್ಲ ಎಂದರೆ ಸರಿಯಲ್ಲ. ಮು.ಮಾ-3 ಬರೆಯಲು ಉಪಯೋಗಿಸುವ ಪೆನ್ನು ಆಗಿದ್ದು, ಯಾವುದೇ ಚಾಕು ಅಲ್ಲ ಎಂದರೆ ಸರಿ. ಮು.ಮಾ-3ರ ಪೆನ್ನಿನಿಂದ ಗಾಯ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಚಾಸಾ-3 ನನ್ನ ಮಗ. ಚಾಸಾ-4 ನನ್ನ ಗಂಡ. ಚಾಸಾ-5 ನಮ್ಮ ಪಕ್ಕದ ಮನೆಯವರು. ನಾವು ಆರೋಪಿಯ ಮೇಲೆ ಹಲ್ಲೆ ಮಾಡಿದ್ದರಿಂದ ಆರೋಪಿ ನಮ್ಮ ವಿರುದ್ಧ ಪೋಲೀಸ್ ಠಾಣೆಗೆ ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಪ್ರ.ವ.ವರದಿಯ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ಹೆಸರುಗಳನ್ನು ಸಾಕ್ಷಿ ಗುರುತಿಸಿದ ಕಾರಣ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ

ಒಂದು ದೂರಿನ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ಆರೋಪಿ ನಮ್ಮ ವಿರುದ್ಧ ದಾಖಲಿಸಿದ್ದಾರೆ ಎಂದರೆ ಸಾಕ್ಷಿ ಒಪ್ಪಿಕೊಂಡ ಕಾರಣ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಾವು ಆರೋಪಿಯ ಮೇಲೆ ಹಲ್ಲೆ ಮಾಡಿ ಆತ ನಮ್ಮ ವಿರುದ್ಧ ದೂರು ಕೊಡುತ್ತಾರೆ ಎಂದು ತಿಳಿದು ನಿಪಿ-3 ರ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-4 ರವರಿಗೆ ಕಾಲಿನಿಂದ ಒದ್ದರು ಎಂದು ಇದೇ ಮೊದಲಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ಮನೆಯಲ್ಲಿಯೇ ಚಿಕಿತ್ಸೆ ಕೊಡಲು ನೀವು ಏನಾದರು ತರಬೇತಿ ಪಡೆದುಕೊಂಡಿದ್ದಿರಾ ಎಂದರೆ ಇಲ್ಲ. ಚಾಸಾ-4 ರವರಿಗೆ ನಾನು ಹೇಳುವ ರೀತಿಯಲ್ಲಿ ಯಾವುದೇ ನೋವು ಉಂಟಾಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ಆ ದಿನ ನಮ್ಮ ಜೊತೆ ಯಾವುದೇ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನಾವೇ ಆರೋಪಿಯೊಂದಿಗೆ ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಮು.ಮಾ-1 ಮತ್ತು 2ರ ಬಟ್ಟೆಯನ್ನು ಸೃಷ್ಟಿ ಮಾಡಿಕೊಂಡು ಪೋಲಿಸರಿಗೆ ನೀಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕು ಎಂದು ವೆನ್ನಿ ಥಾಮಸ್ ರವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಚಾಸಾ-3 ರವರಿಗೆ ಗುದ್ದುವ ರೀತಿಯಲ್ಲಿ ವಾಹನವನ್ನು ಚಲಾಯಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಡ್ಡಾದಿಡ್ಡಿಯಾಗಿ ರಸ್ತೆಯಲ್ಲಿ ಹೋಗುತ್ತಿದ್ದ ನನ್ನ ಮಗನ ಬಳಿ ಆರೋಪಿ ಬದಿಗೆ ಹೋಗುವಂತೆ ಹೇಳಿದ್ದರಿಂದ ಸೇಡಿಗಾಗಿ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿಗೆ ತೊಂದರೆ ಕೊಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಮಗೆ ಬೇಕಾದ ವ್ಯಕ್ತಿಗಳನ್ನು ಪೋಲಿಸರಿಗೆ ಸಾಕ್ಷಿಯಾಗಿ ತೋರಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.